ಕೃಷಿ ವಿಜ್ಞಾನ ಕೇಂದ್ರಗಳ ಪಾತ್ರ ಮಹತ್ವದ್ದು

ದೊಡ್ಡಬಳ್ಳಾಪುರ: ಸಮಗ್ರ ಕೃಷಿ ಪದ್ಧತಿ, ಕಾಲಕ್ಕನುಗುಣವಾಗಿ ಕೃಷಿಯಲ್ಲಿ ನೂತನ ತಂತ್ರಜ್ಞಾನಗಳ ಬಗ್ಗೆ ರೈತರಿಗೆ ತಲುಪಿಸಲು ಕೃಷಿವಿಜ್ಞಾನಕೇಂದ್ರದ ಪಾತ್ರ ಮಹತ್ವದ್ದಾಗಿದೆ ಎಂದು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಸ್.ವಿ.ಸುರೇಶ ಹೇಳಿದರು.

ಅವರು ತಾಲೂಕಿನ ಹಾಡೋನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ 14ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದರು.

ಸಲಹಾ ಸಮಿತಿ ಸಭೆಯಲ್ಲಿ ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ ಹೇಳಿಕೆ

ರೈತರು ಆರಂಭದಲ್ಲಿ ಮಾಹಿತಿ ಪಡೆದು ಕೊಂಡಾಗ ಕೃಷಿ ನಿರ್ವಹಣೆ ಸುಲಭ ವಾಗುತ್ತದೆ. ಅಲ್ಲದೆ ಲಾಭದಾಯಕ ಕೃಷಿ ಮಾಡ ಬಹುದು ಎಂದರು. ಕೃಷಿ ವಿಜ್ಞಾನ ಕೇಂದ್ರದ ಧ್ಯೇಯೋದ್ದೇಶ, ಚಟುವಟಿಕೆಗಳು ಮತ್ತು ವೈಜ್ಞಾನಿಕ ಸಲಹಾ ಸಮಿತಿ ಸಭೆಯ ಉದ್ದೇಶ ವನ್ನು ಸಭೆಗೆ ತಿಳಿಸಿದರು.

ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ.ಜೆ.ವೆಂಕಟೇಗೌಡಮಾತನಾಡಿಪ್ರತಿವರ್ಷ ನಡೆಯುವ ಸಭೆಯಲ್ಲಿ ಅನುಷ್ಠಾನವಾಗಿರುವ ಹಾಗೂ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮೌಲ್ಯಮಾಪನ ಮಾಡಬೇಕು.

ನಂತರ ಬೆಂಗಳೂರು ಗ್ರಾಮಾಂತರ ಜಿಲ್ಲೆ 13ನೇ ವೈಜ್ಞಾನಿಕ ಸಲಹಾ ಸಮಿತಿಯ ನಿರ್ಣಯಗಳ ಬಗ್ಗೆ ಕೈಗೊಂಡ ಕ್ರಮಗಳು, ಕೇಂದ್ರದ ಸಮಗ್ರ ಪ್ರಗತಿ, 2022-23 ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯ ಚಟುವಟಿಕೆಗಳು, ಸುತ್ತು ನಿಧಿ ಚಟು ವಟಿಕೆಗಳು, 2023-24ನೇ ಸಾಲಿನ ಪ್ರಸ್ತಾವಿತ ಕ್ರಿಯಾ ಯೋಜನೆಯನ್ನುಮಂಡಿಸಿದರು.

ಇದೆ ಸಂದರ್ಭದಲ್ಲಿ 2023-24 ನೇ ಸಾಲಿನ ತಾಂತ್ರಿಕ ಕಾರ್ಯಕ್ರಮಗಳ ಅನು ಷ್ಠಾನಕ್ಕೆ ಸಲಹಾ ಸಮಿತಿಯ ಸದಸ್ಯರಿಂದ ಹಾಗೂ ಪ್ರಗತಿಪರ ರೈತರಿಂದ ಚರ್ಚೆ ಮತ್ತು ಸಲಹೆಗಳನ್ನು ಪಡೆಯಲಾಯಿತು.

ಕಾರ್ಯಕ್ರಮದಲ್ಲಿ ಕೃಷಿ ವಿಶ್ವ ವಿದ್ಯಾನಿಯದ ವಿಸ್ತರಣಾ ನಿರ್ದೇಶಕರು, ನೋಡಾಲ್ ಅಧಿಕಾರಿ, ಬೆಂಗಳೂರು ಮತ್ತು ಇತರೆ ವೈಜ್ಞಾನಿಕ ಸಲಹಾ ಸಮಿತಿಯ ಸದಸ್ಯರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರೈತ ಉತ್ಪಾದಕ ಕಂಪನಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಇದ್ದರು.



ಬಿಳಿಗಿರಿರಂಗನಬೆಟ್ಟದಲ್ಲಿ ಸೋಜಿಗ ಕೀಟ ಪತ್ತೆ

■ **ವಿಕ ಸುದ್ದಿಲೋಕ** ಚಾಮರಾಜನಗರ

ದಕ್ಷಿಣ ಭಾರತದಲ್ಲೇ ಪ್ರಥಮವಾಗಿ ಹೊಸ ಬಗೆಯ ಕೀಟವೊಂದು ಬಿಳಿಗಿರಿರಂಗನಬೆಟ್ಟದಲ್ಲಿ ಪತ್ತೆಯಾಗಿದೆ.

ಪರಿಸರ ವ್ಯವಸ್ಥೆ ಕುರಿತು ಸಂಶೋಧನೆಯಲ್ಲಿ ತೊಡಗಿರುವ ಏಟ್ರಿ ಸಂಸ್ಥೆಯು ಬೆಟ್ಟದಲ್ಲಿ ಈ ಹೊಸ ಕೀಟವನ್ನು ಪತ್ತೆ ಮಾಡಿದೆ. ಇದು ಬಿಳಿಗಿರಿರಂಗನಬೆಟ್ಟದಲ್ಲಿ ಪತ್ತೆ ಆಗಿರುವ ಹಿನ್ನೆಲೆಯಲ್ಲಿ ಅಲ್ಲಿನ ಸೋಲಿಗರನ್ನು ಪ್ರತಿನಿಧಿಸುವಂತಹ ಹೆಸರನ್ನೇ ಆ ಕೀಟಕ್ಕೆ (soliga ecarinata) ನಾಮಕರಣ ಮಾಡಲಾಗಿದೆ.

ಏಟ್ರಿ ಸಂಸ್ಥೆಯಿಂದ ಶೋಧ



ಕಳೆದ 15 ವರ್ಷಗಳ ಹಿಂದೆ ನಾಗಾಲ್ಯಾಂಡ್‌ನಲ್ಲಿ ಈ ರೀತಿಯ ಕೀಟ ಕಂಡು ಬಂದಿತ್ತು. ಈಗ ದಕ್ಷಿಣ ಭಾರತದಲ್ಲಿ ಪ್ರಥಮವಾಗಿ ಬಿಳಿಗಿರಿರಂಗನಬೆಟ್ಟದಲ್ಲಿ ಕಂಡು ಬಂದಿದೆ. ಈ ಕೀಟವು ತುಂಬ ವರ್ಣರಂಜಿತವಾಗಿದ್ದು, ನೋಡುಗರ ಕಣ್ಮಳೆಯುವ ರೀತಿಯಲ್ಲಿದೆ. ನಮ್ಮ ಸಂಸ್ಥೆಯ ಸಂಶೋಧಕರಾದ ಪ್ರಿಯದರ್ಶನ್ , ರಂಜಿತ್ ಅವರು ಶೋಧಿಸಿದ್ದಾರೆ ಎಂದು ಏಟ್ರಿ ಸಂಸ್ಥೆಯ ಸಿದ್ದಪ್ಪಶೆಟ್ಟಿ ತಿಳಿಸಿದ್ದಾರೆ.

01-02-2023
V-karantaka Pg 03

01-02-2023
Hosadiganta Pg 11

For more information visit
University Library Website
Web - uasbagrilibindia.org
E-mail- librarian@uasbangalore.edu.in

ರೈತಪರ ಬಜೆಟ್ ಮಂಡನೆ

ನೂತನ ಯೋಜನೆಗಳಿಗೆ ಚಾಲನೆ | ಸಿಎಂ ಬೊಮ್ಮಾಯಿ ಭರವಸೆ

ಧಾರವಾಡ: ಅನ್ನದಾತರು ನಾಡಿನ ಜನರ ಹೊಟ್ಟೆ ತುಂಬಿಸುತ್ತಿದ್ದಾರೆ. ರೈತರ ಕುರಿತು ಅಪಾರ ಗೌರವ ಹಾಗೂ ಕಾಳಜಿ ಹೊಂದಿರುವ ಹಿನ್ನೆಲೆ 'ಪ್ರಸ್ತುತ ಕೃಷಿ ಬಜೆಟ್' ಮಂಡಿಸುವುದಾಗಿಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರೈತರಿಗೆ ಭರವಸೆ ನೀಡಿದರು.

ಕೃಷಿ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯ ಸಹಯೋಗದಲ್ಲಿ ಮಂಗಳವಾರ ಕೃವಿ ವಿವಿ ಆವರಣದಲ್ಲಿ ನಡೆದ ನೂತನ ಯೋಜನೆಗಳ ಚಾಲನೆ ಹಾಗೂ ಕೃಷಿ ಪಂಡಿತ್ ಹಾಗೂ ಕೃಷಿ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ ರೈತರು ಹತಾಶರಾಗಬೇಕಿಲ್ಲ. ಬರುವ ದಿನಗಳು ಉತ್ತಮವಾಗಿ ಇರಲಿವೆ. ಗ್ರಾಮೀಣರ ಬದುಕು ಹಸನಾಗಿಸುವ ನಿಟ್ಟಿನಲ್ಲಿ ಸರ್ಕಾರ ಮಹತ್ವದ ಹೆಜ್ಜೆ ಇಡಲು ಅಣಿಯಾಗಿದೆ. ರೈತಪರ-ಕಾರ್ಮಿಕ ಪರ ಬಜೆಟ್ ಮಂಡಿಸುವುದಾಗಿ ವಾಗ್ದಾನ ಮಾಡಿದರು.

ಕೃಷಿಗೆ ಪೂರಕ ಕಂಬಾರ, ಬಡಿಗ, ಇತ್ಯಾದಿ ಚಟುವಟಿಕೆಗಳಿಗೆ ಕಾಯಕ ಯೋಜನೆ, ಯುವಕರ ಉತ್ಪಾದನೆಗೆ ಮಾರುಕಟ್ಟೆ ಕಲ್ಪಿಸಲು ಸ್ವಾಮಿ ವಿವೇಕಾನಂದ ಯೋಜನೆ ಜಾರಿ ಮೂಲಕ ದುಡಿಯುವ ವರ್ಗಕ್ಕೆ ಆರ್ಥಿಕ ಬಲ ನೀಡುವ ಉದ್ದೇಶ ಹೊಂದಿದೆ ಎಂದರು. ಕಾಯಕ ಯೋಜನೆಯಡಿ ರೂ.50 ಸಾವಿರ ವಿವೇಕ ಯೋಜನೆಗೆರೂ.5 ಲಕ್ಷಅನುದಾನನೀಡಿ, ಗ್ರಾಮೀಣರ ಆರ್ಥಿಕತೆ ಹೆಚ್ಚಿಸುವ ಮೂಲಕ ಸಾಮಾಜಿಕ ಬೆಳವಣಿಗೆ ಒತ್ತು ನೀಡಲಿದೆ. ಕೃಷಿ ಕ್ಷೇತ್ರದ ಸಂಶೋಧನೆಗೂ ಆದ್ಯತೆ ನೀಡಲಾಗುವುದೆಂದು ಹೇಳಿದರು.

ಲ್ಯಾಬ್ ಟು ಲ್ಯಾಂಡ್ ದೊಡ್ಡ ಕ್ರಾಂತಿ ಮಾಡಿದೆ. ಇದು ಮಣ್ಣು ರಕ್ಷಣೆ ಯೋಜನೆ. ಸದ್ಯದ ಕೃಷಿ ಖರ್ಚು ಅನಿಶ್ಚಿತತೆ ಇದೆ. ಇದನ್ನು ನಿಶ್ಚಿತತೆಗೆ ತರಲು ಪ್ರಯತ್ನಿಸಲಿದೆ. ಭವಿಷ್ಯದಲ್ಲಿ ವಿದೇಶ ಮಾರುಕಟ್ಟೆ ನೋಡಿ ರೈತರ ಬೆಳೆಗೆ ದರ ನಿಗದಿ ಮಾಡಲಿದೆ ಎಂದರು. ಶ್ರೀಮಂತರಿಂದ ದೇಶ-ನಾಡು ಕಟ್ಟುವುದು ಅಸಾಧ್ಯ. ಇದು ರೈತರು-ಕಾರ್ಮಿಕ ವರ್ಗದಿಂದ ಸಾಧ್ಯ. 21ನೇ ಶತಮಾನ ದುಡ್ಡಿದ್ದವರದಲ್ಲ, ದುಡಿಯುವವರ ಶತಮಾನ. ದುಡಿಮೆಗೆ ಬೆಲೆ ಬರಲು ಕೃಷಿ ಮಾರುಕಟ್ಟೆ ನೀತಿಯೂ ಬದಲಾಗಬೇಕಿದೆ ಎಂದರು.

ಸಮಾರಂಭದಲ್ಲಿ ರೈತರಿಗೆ ಕೃಷಿ ಪಂಡಿತ ಹಾಗೂ ರಾಜ್ಯ ಕೃಷಿ ಪ್ರಶಸ್ತಿ ಪ್ರದಾನ ಮಾಡಿದರು. ಶಾಸಕ ಅಮೃತ ದೇಸಾಯಿ ಅಧ್ಯಕ್ಷತೆ ವಹಿಸಿದ್ದರು. ಜವಳಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಶಾಸಕರಾದ ಅರವಿಂದ ಬೆಲ್ಲದ, ಗೋವಿಂದರಾಜು, ಸಿದ್ದು ಸವದಿ, ವಿವಿಧ ನಿಗಮ-ಮಂಡಳಿ ಅಧ್ಯಕ್ಷರಾದ ತವನಪ್ಪ ಅಷ್ಟಗಿ, ರಾಜೇಶ ಕೋಟೇನ್ನವರ ಇದ್ದರು.



ವಿವಿಧ ಕಾರ್ಯಕ್ರಮಗಳಿಗೆ ಚಾಲನೆ

51.80 ಲಕ್ಷ ಫಲಾನುಭವಿಗಳಿಗೆ ರೂ.383.15 ಕೋಟಿ ರೈತಶಕ್ತಿ ಯೋಜನೆ, ರೂ. 4.55 ಲಕ್ಷ ಮಕ್ಕಳಿಗೆ ರೂ.241.86 ಕೋಟಿ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ, ರೂ.11.52 ಕೋಟಿಯ ಕೃಷಿ ಸಂಜೀವಿನಿ ಯೋಜನೆ, ರೂ.10 ಕೋಟಿ ನೈಸರ್ಗಿಕ ಕೃಷಿ, ಡಾ.ಎಸ್.ವಿ.ಪಾಟೀಲ ಸಂಶೋಧನೆ, ತರಬೇತಿ, ಅಮೃತ ಮಹೋತ್ಸವ ಕಾರ್ಯಕ್ರಮಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು.

> ದೇಶಕ್ಕೆ ಟಾಟಾ-ಬಿರ್ಲಾ ಅನ್ನ ಕೊಡಲ್ಲ. ಕೃಷಿ ನಾಶವಾದರೆ ದೇಶಕ್ಕೆ ದುರ್ಭಿಕ್ಷೆ ಕಟ್ಟಿಟ್ಟ ಬುತ್ತಿ. ಹೀಗಾಗಿ ದೇಶದ ಸುಭಿಕ್ಷತೆಗೆ ಅನ್ನದಾತ-ಕೃಷಿ ಉಳಿವು ಅಗತ್ಯ. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಂಡಿದೆ.
>
> ಬಿ.ಸಿ.ಪಾಟೀಲ, ಕೃಷಿ ಸಚಿವ

ಕೃಷಿ ಪ್ರಶಸ್ತಿ ಪುರಸ್ಕೃತರ ಮಕ್ಕಳಿಗೆ ನೆರವು

ಧಾರವಾಡ: ಕೃಷಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಸೇರಿದಂತೆ ಉನ್ನತ ಶಿಕ್ಷಣ ಮಾಡುವ ಕೃಷಿ ಪ್ರಶಸ್ತಿ ಪುರಸ್ಕೃತರ ಮಕ್ಕಳ ಶಿಕ್ಷಣ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಲಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ.



ಕೃಷಿ ಇಲಾಖೆ ಹಾಗೂ ಕೃಷಿ ವಿವಿ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ಕೃಷಿ ಪಂಡಿತ ಮತ್ತು ಕೃಷಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು,ಈ ಪ್ರಶಸ್ತಿ ಪಡೆದವರು ಕೃಷಿಗೆ ಅಪಾರ ಕೊಡುಗೆ ನೀಡಿದವರು. ಹೀಗಾಗಿ ಅಂತಹ ರೈತರು ಮತ್ತು ರೈತ ಮಹಿಳೆಯರ ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರವೇ ಅಗತ್ಯ ಹಣಕಾಸು ನೆರವು ಭರಿಸಲಿದೆ ಎಂದರು.

ಜತೆಗೆ ಈ ಬಾರಿ ರೈತರ ಪರವಾಗಿ ವಿಶೇಷವಾದ ಬಜೆಟ್ ಇರಲಿದೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

01-02-2023
Udayavani Pg 01

01-02-2023
Hosadiganta Pg 02

ರಾಜ್ಯದಲ್ಲಿ ಅರಳುತ್ತಿದೆ ಪುಷ್ಪೋದ್ಯಮ ಚಟುವಟಿಕೆ

ಪ್ರೇಮಿಗಳ ದಿನಕ್ಕೂ ಮೊದಲೇ ಗುಲಾಬಿಗೆ ಬೇಡಿಕೆ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesgroup.com

ಕೋವಿಡ್ ವೇಳೆ ನೆಲ ಕಚ್ಚಿದ್ದ ಪುಷ್ಪೋದ್ಯಮವು ಈಗ ಸ್ಥಳೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಗರಿಗೆದರುತ್ತಿದೆ.

ಸ್ಥಳೀಯ ಮಾರುಕಟ್ಟೆಯಲ್ಲಿ ವಹಿವಾಟು ಚುರುಕಾಗಿದೆ. ಬೆಳೆಗಾರರ ಅದೃಷ್ಟ ಖುಲಾಯಿಸಿದೆ. ಪಾಲಿ ಹೌಸ್‌ಗಳಲ್ಲಿ ಬೆಳೆಯುವ ಗುಲಾಬಿ, ಜರ್ಬೆರಾ, ಆಂಥೋರಿಯಂ, ಆರ್ಕಿಡ್ ಸೇರಿದಂತೆ ವಿದೇಶಗಳಿಗೆ ರಫ್ತಾಗುತ್ತಿದ್ದ ಹಲವು ಬಗೆಯ ಗುಲಾಬಿ ಹೂವುಗಳಿಗೆ ಅತಿ ಹೆಚ್ಚು ಬೇಡಿಕೆ ಸೃಷ್ಟಿಯಾಗಿದೆ. ಮದುವೆ, ಸಭೆ, ಸಮಾರಂಭಗಳು ಸೇರಿದಂತೆ ಮತ್ತಿತರ ಕಾರ್ಯಕ್ರಮಗಳಲ್ಲಿ ಅಲಂಕಾರಕ್ಕಾಗಿ ಯಥೇಚ್ಛವಾಗಿ ಬಳಸಲಾಗುತ್ತದೆ. ಹೀಗಾಗಿ ನಿತ್ಯ ನೂರಾರು ಕೋಟಿ ರೂ.ಗಳ ವಹಿವಾಟು ನಡೆಯುತ್ತಿದೆ.



ಕೋವಿಡ್ ಕಾರಣದಿಂದ ಕಳೆದ ಮೂರು ವರ್ಷಗಳಿಂದ ಹೂವುಗಳಿಗೆ ಬೇಡಿಕೆಯೇ ಇರಲಿಲ್ಲ. ಹೀಗಾಗಿ ಸಾಕಷ್ಟು ಜನ ಪಾಲಿಹೌಸ್‌ಗಳಲ್ಲಿ ಹೂವಿನ ಬೆಳೆ ಕಿತ್ತು, ತರಕಾರಿ ಬೆಳೆಗಳತ್ತ ಮೊರೆ ಹೋದರು. ಈಗ ಜನಜೀವನ ಮತ್ತೆ ಸುಧಾರಿಸುತ್ತಿದೆ. ಎಂದಿನಂತೆ ಮತ್ತೆ ಕಾರ್ಯಕ್ರಮಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿವೆ. ಅದ್ಧೂರಿ ಮದುವೆಗಳು ನಡೆಯುತ್ತಿವೆ. ಸ್ಟಾರ್ ಹೋಟೆಲ್‌ಗಳಲ್ಲಿ ಡೆಲಿಗೇಟ್ಸ್ ಮೀಟಿಂಗ್‌ಗಳು ನಡೆಯುತ್ತಿವೆ. ಹೀಗಾಗಿ ಅಲಂಕಾರಕ್ಕಾಗಿ ಪಾಲಿಹೌಸ್‌ಗಳಲ್ಲಿ ಬೆಳೆದ ಹೂವುಗಳಿಗೆ ಬೇಡಿಕೆ ಬಂದಿದೆ. ''ಪಾಲಿಹೌಸ್‌ನಲ್ಲಿ ಅರ್ಧ ಎಕರೆ ಗುಲಾಬಿ ಬೆಳೆದಿದ್ದೇವೆ. ಈ ಬಾರಿ ಬೆಳೆಯೂ ಚೆನ್ನಾಗಿ ಬಂದಿದೆ. ಸ್ಥಳೀಯ ಮಾರುಕಟ್ಟೆಯಲ್ಲಿ ದರವೂ ಉತ್ತಮವಾಗಿದೆ,'' ಎನ್ನುತ್ತಾರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರೈತ ಕೃಷ್ಣಪ್ಪ.

''ನಿತ್ಯ ಬೆಂಗಳೂರು ಸುತ್ತಮುತ್ತ ಸುಮಾರು 20-25 ಲಕ್ಷ ಹೂವುಗಳು ಉತ್ಪಾದನೆಯಾಗುತ್ತಿವೆ. ಸಾಮಾನ್ಯ ದಿನಗಳಲ್ಲಿ ಸ್ಥಳೀಯವಾಗಿಯೇ ಹೆಚ್ಚು ಬಳಕೆಯಾದರೆ, ಪ್ರೇಮಿಗಳ ದಿನಕ್ಕೆ ವಿಶೇಷವಾಗಿ ಕೆಂಪು ಗುಲಾಬಿ ಹೂವುಗಳು ವಿದೇಶಗಳಿಗೆ ರಫ್ತಾಗುತ್ತವೆ. ಇದರಲ್ಲಿ ಸ್ವಲ್ಪ ಪ್ರಮಾಣದ ಹೂವು ಹೊಸ ವರ್ಷಕ್ಕೂ ರವಾನೆಯಾಗುತ್ತದೆ,'' ಎನ್ನುತ್ತಾರೆ ಸೌತ್ ಇಂಡಿಯಾ ಫ್ಲೋರಿಕಲ್ಚರ್ ಅಸೋಸಿಯೇಷನ್‌ನ ನಿರ್ದೇಶಕ ಶ್ರೀಕಾಂತ್ ಬೊಲ್ಲೆಪಲ್ಲಿ.

ವಿಮಾನ ವೆಚ್ಚ: ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ಏರಿಕೆಯಿಂದ ಕಳೆದ ಒಂದೂವರೆ ವರ್ಷದ ಹಿಂದೆಯೇ ವಿಮಾನ ದರ ಏರಿಕೆಯಾಗಿತ್ತು. ಜತೆಗೆ ಕೋವಿಡ್ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ವಿಮಾನ ಸಂಚಾರವಿಲ್ಲದೆ ನಷ್ಟ ಉಂಟಾಗಿತ್ತು. ವಾಣಿಜ್ಯ ಉದ್ದೇಶದ ವಿಮಾನ ದರದಲ್ಲಿ ಶೇ.200ರಷ್ಟು ಏರಿಕೆಯಾಗಿದೆ. ಹೀಗಾಗಿ ಒಂದು ಹೂವಿಗೆ ಕನಿಷ್ಠ ಸುಮಾರು 4 ರೂ. ನಿಂದ 6 ರೂ.ವರೆಗೆ ವಿಮಾನ ವೆಚ್ಚವನ್ನೇ ಭರಿಸಬೇಕಾಗಿದೆ. ಉತ್ಪಾದನಾ ವೆಚ್ಚ, ಸಾರ್ಟಿಂಗ್, ಪ್ಯಾಕಿಂಗ್, ಕಾರ್ಮಿಕರ ವೆಚ್ಚ ಇತ್ಯಾದಿಗಳ ಹೊರೆ ಹೆಚ್ಚಾಗಿದೆ. ಆದರೂ ವಿದೇಶಗಳಿಗೆ ಕಳುಹಿಸುವುದು ನಿಲ್ಲುವುದಿಲ್ಲ. ಇದೆಲ್ಲವನ್ನೂ ಸರಿದೂಗಿಸುವಂತೆಯೇ ದರ ನಿಗದಿಪಡಿಸಿ ಅಸೋಸಿಯೇಷನ್‌ಗಳ ಮೂಲಕ ರಫ್ತು ಮಾಡಲು ಬೆಳೆಗಾರರು ಮುಂದಾಗಿದ್ದಾರೆ ಎಂದು ಶ್ರೀಕಾಂತ್ ಬೊಲ್ಲೆಪಲ್ಲಿ ನುಡಿದರು.

ದೇಶದಲ್ಲಿ ಹೆಚ್ಚು ಬಳಕೆ ರಾಜ್ಯಗಳು

- ಹೊಸದಿಲ್ಲಿ
- ಕೋಲ್ಕೊತಾ
- ಮುಂಬಯಿ
- ಹೈದರಾಬಾದ್
- ಚೆನ್ನೈ
- ಗೋವಾ

ವಿಜಯ ಕರ್ನಾಟಕ ವಿಕ INFO

ಗುಲಾಬಿಗೆ ಕರ್ನಾಟಕ ಪ್ರಶಸ್ತ ತಾಣ

ಉತ್ತಮ ಹವಾಗುಣಕ್ಕೆ ಹೆಸರಾದ ನಗರ ಬೆಂಗಳೂರು. ಅದರಲ್ಲೂ ಪಾಲಿಹೌಸ್‌ಗಳಲ್ಲಿ ಬೆಳೆಸುವ ಡಚ್ ಗುಲಾಬಿ ಹೂವಿನ ಬೆಳೆಗೆ ಹೇಳಿ ಮಾಡಿಸಿದ ತಾಣವಾಗಿದೆ. ಉತ್ತಮ ವಾತಾವರಣದಿಂದಾಗಿ ಹೂವುಗಳು ಗುಣಮಟ್ಟ ಹೊಂದಿರುತ್ತವೆ. ಹೀಗಾಗಿ ವಿದೇಶಗಳಿಂದ ಪ್ರೇಮಿಗಳ ದಿನಕ್ಕೆ ಗುಲಾಬಿಗೆ ಈಗಾಗಲೇ ಬೆಂಗಳೂರಿನ ಹೂವುಗಳಿಗೆ ಬೇಡಿಕೆ ಹೆಚ್ಚಿದೆ. ಜ. 28-29ರಂದು ರಫ್ತು ಪ್ರಕ್ರಿಯೆ ಆರಂಭವಾಗಿದೆ.

20-25
ಲಕ್ಷ ಹೂವುಗಳು ನಿತ್ಯ ಬೆಂಗಳೂರು ಸುತ್ತಮುತ್ತ ಗ್ರಾಮ ಉತ್ಪಾದನೆ

4-6 ರೂ.
ಹೊರ ದೇಶಕ್ಕೆ ವಿಮಾನದಲ್ಲಿ ಒಂದು ಹೂವಿನ ಸಾಗಣೆಗೆ ಈಗ ಬರುವ ವೆಚ್ಚ

ಹರಾಜು ಕೇಂದ್ರದಿಂದ ನೇರ ರವಾನೆಯ ರಾಜ್ಯ
ಜಾರ್ಖಂಡ್ ಹಾಗೂ ಅಸ್ಸಾಂಗೂ ಬೆಂಗಳೂರಿನ ಹರಾಜು ಕೇಂದ್ರದಿಂದ ಹೂವು ನೇರ ರವಾನೆಯಾಗುತ್ತಿದೆ.

ಬೃಹತ್ ಕೇಂದ್ರ
ಹಾಲೆಂಡ್‌ನಲ್ಲಿ ವಿಶ್ವದ ಬೃಹತ್ ಹೂವು ಹರಾಜು ಮಾಡುವ ಕೇಂದ್ರವಿದೆ. ಬೆಂಗಳೂರಿನ ಹೆಬ್ಬಾಳದ ಅಂತಾರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರವು ಭಾರತದಲ್ಲಿ ಅತಿ ದೊಡ್ಡದಾಗಿದೆ.

ರಫ್ತಾಗುವ ಕೆಂಪು ಗುಲಾಬಿ ತಳಿಗಳು
ತಾಜ್‌ಮಹಲ್
ಹಾಟ್‌ಶಾಟ್
ಕಾರ್ವೆಟ್
ರಾಕ್‌ಸ್ಟಾರ್
ಬ್ರಿಲಿಯಂಟ್
ಫರ್ಸ್ಟ್ ರೆಡ್
ಗ್ರ್ಯಾಂಡ್‌ಗಾಲಾ

ರಫ್ತಾಗುವ ದೇಶಗಳು
ಸಿಂಗಾಪುರ
ಮಲೇಷ್ಯಾ
ಗಲ್ಫ್ ರಾಷ್ಟ್ರ



ಡಚ್ ಗುಲಾಬಿ ರಾಜವೇ ಫಸ್ಟ್

ಡಚ್ ಗುಲಾಬಿ ಬೆಳೆಯುವಲ್ಲಿ ಕರ್ನಾಟಕ ಪ್ರಥಮ ಸ್ಥಾನ ಹೊಂದಿದೆ. ವಿಶ್ವದಲ್ಲಿ ಕೀನ್ಯಾ, ಇಥೋಪಿಯಾ ಹಾಗೂ ಕೊಲಂಬಿಯಾಗಳು ಗುಲಾಬಿ ಹೂವು ಬೆಳೆಯುವುದರಲ್ಲಿ ಮುಂಚೂಣಿಯಲ್ಲಿವೆ.

ಬೆಂಗಳೂರು ಸುತ್ತಮುತ್ತ ಪ್ರತಿದಿನ ಸುಮಾರು 25 ಲಕ್ಷಕ್ಕೂ ಹೆಚ್ಚು ಹೂವುಗಳು ಉತ್ಪಾದನೆಯಾಗುತ್ತವೆ. ಈ ಪೈಕಿ ಗುಲಾಬಿಯೊಂದೇ ಸುಮಾರು 10 ಲಕ್ಷಕ್ಕೂ ಹೆಚ್ಚಿವೆ. ಈ ಬಾರಿ ವಿದೇಶಗಳಲ್ಲೂ ಒಳ್ಳೆಯ ಬೇಡಿಕೆಯಿದೆ. ಈ ವರ್ಷ ಹೊರರಾಷ್ಟ್ರಗಳಿಗೆ ಪ್ರೇಮಿಗಳ ದಿನಕ್ಕೆಂದು ಸುಮಾರು 30ಲಕ್ಷಕ್ಕೂ ಹೆಚ್ಚು ಹೂವುಗಳು ರಫ್ತು ಆದರೆ, ಉಳಿದಂತೆ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟವಾಗಲಿವೆ.

-ಶ್ರೀಕಾಂತ್ ಬೊಲ್ಲೆಪಲ್ಲಿ
ನಿರ್ದೇಶಕರು, ಸೌತ್ ಇಂಡಿಯಾ ಫ್ಲೋರಿಕಲ್ಚರ್ ಅಸೋಸಿಯೇಷನ್

01-02-2023
V-karntaka Pg 02

ದೀರ್ಘಾವಧಿ ಬಾಳಿಕೆಗೆ ವಿಜ್ಞಾನಿಗಳ ಸಂಶೋಧನೆ

ಸಿರಿಧಾನ್ಯ ಉತ್ಪನ್ನಗಳ ಬಾಳಿಕೆ ಹೆಚ್ಚಳ?

ನವದೆಹಲಿ: ಭಾರತೀಯ ಸಿರಿಧಾನ್ಯಗಳು ಜಾಗತಿಕ ಮಾರುಕಟ್ಟೆಗೆ ಪ್ರವೇಶಿಸಿದ ಬೆನ್ನಲ್ಲೇ ಈ ಧಾನ್ಯಗಳಿಂದ ತಯಾರಿಸಲ್ಪಟ್ಟ ವಸ್ತುಗಳು ದೀರ್ಘಕಾಲ ಬಾಳಿಕೆ ಬರುವಂತೆ ಮಾಡುವ ನಿಟ್ಟಿನಲ್ಲಿ ವಿಜ್ಞಾನಿಗಳು ಸಂಶೋಧನೆ ಆರಂಭಿಸಿದ್ದಾರೆ.

ಮೈಸೂರಿನ ಸಿಎಸ್‌ಐಆರ್-ಸಿಎಫ್‌ಟಿಆರ್‌ಐನಲ್ಲಿ (ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ) ಹಲವು ಗಂಭೀರ ಸಂಗತಿಗಳ ಸಂಶೋಧನೆ ಶುರುವಾಗಿದೆ ಎಂದು ನಿರ್ದೇಶಕಿ ಶ್ರೀದೇವಿ ಅನ್ನಪೂರ್ಣಾ ಸಿಂಗ್ ಹೇಳಿದ್ದಾರೆ.

ಸಿರಿಧಾನ್ಯಗಳಲ್ಲಿ ಲಿಪಾಸೆ ಹೆಸರಿನ ಒಂದು ಕಿಣ್ವ ಇದೆ. ಅದು ಸಿರಿಧಾನ್ಯಗಳ ಉತ್ಪನ್ನಗಳ ಬಾಳಿಕೆಯನ್ನು ಕುಗ್ಗಿಸುತ್ತದೆ. ಕೆಲವು ಸಮಯವಾದ ಮೇಲೆ ವಸ್ತುಗಳಿಂದ ಕೆಟ್ಟ ವಾಸನೆ, ಕೆಟ್ಟ ರುಚಿ ಶುರುವಾಗುತ್ತದೆ. ಈ ಪರಿಸ್ಥಿತಿಗೆ ಕಾರಣವಾಗುವ ಸಕ್ರಿಯ ಕಿಣ್ವವನ್ನು ತೆಗೆಯಬೇಕು, ಹಾಗೆಯೇ ಪೋಷಕಾಂಶಗಳನ್ನೂ ಉಳಿಸಿಕೊಳ್ಳಬೇಕು ಎನ್ನುವುದು ವಿಜ್ಞಾನಿಗಳ ಉದ್ದೇಶ. ಕೆಲವು ಆಹಾರ ಸಂಸ್ಕರಣಾ ಕೇಂದ್ರಗಳಲ್ಲಿ ಈ ಧಾನ್ಯಗಳ ಹೊರಪದರವನ್ನು ತೆಗೆಯುತ್ತಾರೆ. ಇದರಿಂದ ಅವುಗಳಲ್ಲಿರುವ ನಾರು ಮತ್ತು ಲವಣದ ಅಂಶ ಇಲ್ಲವಾಗುತ್ತದೆ. ಹೀಗಾಗ



ಬಾರದು, ಆದರೆ ಧಾನ್ಯಗಳಲ್ಲಿನ ಜೀವಸತ್ವಗಳೂ ಉಳಿಯಬೇಕು. ಈ ನಿಟ್ಟಿನಲ್ಲಿ ಸಂಶೋಧನೆ ಸಾಗಿದೆ ಎಂದು ಶ್ರೀದೇವಿ ಹೇಳಿದ್ದಾರೆ.

ಔಷಧೀಯ ಗುಣ ಪತ್ತೆಗೆ ಶ್ರಮ: ನಮ್ಮ ಪೂರ್ವಿಕರು ಸಿರಿಧಾನ್ಯಗಳಲ್ಲಿ ಔಷಧೀಯ ಗುಣವಿದೆ ಎಂದು ಹೇಳುತ್ತಾರೆ. ಆದರೆ ಅವುಗಳಲ್ಲಿರುವ ಯಾವ ಅಂಶ ಇದಕ್ಕೆ ಕಾರಣವಾಗುತ್ತದೆ, ಹೇಗೆ ಕಾರ್ಯನಿರ್ವಹಿಸುತ್ತದೆ ಎಂದು ಗೊತ್ತಾಗಿಲ್ಲ. ಇದು ಗೊತ್ತಾಗದೆ ಅವುಗಳ ಔಷಧೀಯ ಗುಣಗಳ ಬಗ್ಗೆ ಹೇಳಿದರೆ ಉಪಯೋಗವಿಲ್ಲ. ನಾವು ಅದನ್ನೂ ಸಂಶೋಧನೆಯ ಮೂಲಕ ಸಾಬೀತು ಮಾಡಬೇಕಾಗಿದೆ ಎನ್ನುವುದು ಶ್ರೀದೇವಿಯ ಅಭಿಮತ.

01-02-2023
Udayavani Pg 08